**ಪಿಡಬ್ಲ್ಯೂ .1** **ಓ.ಎಸ್ ಸಂಖ್ಯೆಃ 265-2022**

**ದಿಃ 20.08.2026 ರಂದು ಪಿಡಬ್ಲ್ಯೂ -1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಎಂ.ಎಸ್.ಸಿ ಪಿ.ಎಚ್.ಡಿ ಯ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸಾದರಹಳ್ಳಿಯ ಜೆಡ್ ಗಾರ್ಡನ್ ನಲ್ಲಿ ವಾಸವಾಗಿದ್ದೇನೆ. ನನಗೆ ಈ ದಾವೆಯ ಬಗ್ಗೆ ತಿಳಿದಿದೆ. ಈ ದಾವೆ ದಾಖಲು ಮಾಡಲು ಮಾಹಿತಿಯನ್ನು ನಾನು ನೀಡಿರುತ್ತೇನೆ. ನಾನು 2014 ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ. ನಾನ್ನೊಬ್ಬಳೇ ಈ ದಾವಾ ಆಸ್ತಿಯ ಮಾಲೀಕಳಾಗಿರುತ್ತೇನೆ. ದಾವಾ ಆಸ್ತಿಯ ಖರೀದಿ ಮೊತ್ತದ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ಯಜಮಾನರಿಗೆ ತಿಳಿದಿರುತ್ತದೆ. ದಾವಾ ಆಸ್ತಿಯನ್ನು ನಾನು ಸುಬ್ಬಯ್ಯ ಎಂಬುವವರಿಂದ ಖರೀದಿಸಿರುತ್ತೇನೆ. ದಾವಾ ಆಸ್ತಿ ಖರೀದಿ ಪೂರ್ವದಲ್ಲಿ ದಾವಾ ಆಸ್ತಿಯ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡಿದ್ದರಾ ಎಂದರೇ, ಆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖರೀದಿ ಪೂರ್ವದಲ್ಲಿ ನಾನು ವಕೀಲರಿಂದ ಕಾನೂನು ಸಲಹೆ ಪಡೆದಿರುತ್ತೇನೆ. ನನ್ನ ಪತಿ ಪೈಲೆಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ಪತಿ ನಿವೃತ್ತ ಏರಪೋರ್ಸ್ ಪೈಲೆಟ್ ಆಗಿರುವುದರಿಂದ, ಅವರಿಗೆ ಪಿಂಚಣಿ ಬರುತ್ತದೆ. ದಾವಾ ಆಸ್ತಿಯ ಖರೀದಿ ಮೊತ್ತವನ್ನು ನನ್ನ ಪತಿ ಭರಿಸಿರುತ್ತಾರೆ. ದಾವಾ ಆಸ್ತಿಯ ಮೂಲ ಕ್ರಯ ಪತ್ರ ಬ್ಯಾಂಕನಲ್ಲಿರುವ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ. ನನಗೆ ಜೆಡ್ ಗಾರ್ಡನ್ ಫ್ಲಾಟ್ ಓವನರ್ ಅಸೋಸಿಯೇಶನ್ ಬಗ್ಗೆ ತಿಳಿದಿದೆ. ನಾನು ಸದರಿ ಅಸೋಸಿಯೇಶನ್ ನಲ್ಲಿ ಸದಸ್ಯಳಾಗಿರುತ್ತೇನೆ.

**ಮುಂದುವರೆದ ವಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**